# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ಕಾವ ಪರೀಕ್ಷೆ – ೨೦೨೨

ಪ್ರಶ್ನೆಪತ್ರಿಕೆ – ೧

## ಕನ್ನಡ ಗದ್ಯ ಪದ್ಯ ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** | **ಗರಿಷ್ಠ ಅಂಕಗಳು : ೮೦**

### ಕಾವ್ಯ ಭಾಗ

**I. ಕೆಳಗಿನ ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ. ೧x೫=೫**

(೧) ನೂರು ಮತದ ಹೊಟ್ಟ ತೂರಿ
ಎಲ್ಲ ತತ್ತ್ವದೆಲ್ಲೆ ಮೀರಿ
ನಿರ್ದಿಗಂತವಾಗಿ ಏರಿ,
ಓ ನನ್ನ ಚೇತನ,
ಆಗು ನೀ ಅನಿಕೇತನ !

(೨) ಮನೆಮನೆಯಲಿ ದೀಪ ಮುಡಿಸಿ
ಹೊತ್ತು ಹೊತ್ತಿಗೆ ಅನ್ನ ಉಣಿಸಿ
ತಂದೆ ಮಗುವ ತಬ್ಬಿದಾಕೆ
ನಿನಗೆ ಬೇರೆ ಹೆಸರು ಬೇಕೆ?
ಸ್ತ್ರೀ ಎಂದರೆ ಅಷ್ಟೇ ಸಾಕೆ?

**II. ಕೆಳಗಿನ ಮೂರಕ್ಕೆ ಸಂದರ್ಭ ಸ್ವಾರಸ್ಯ ಬರೆಯಿರಿ. ೩x೩=೯**

೧. ಕರುಣಾಳು ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ
೨. ನನ್ನವ್ವ ಫಲವತ್ತಾದ ಕಪ್ಪು ನೆಲ
೩. ಕಿಟಕಿಯಲ್ಲಿ ನಿಲ್ಲಬೇಡ, ನಿಂದು ನನ್ನ ಕಾಡಬೇಡ
೪. ಅಡುಗೆ ಮನೆಯ ಕೇಂದ್ರ ಒಲೆ
೫. ಉಗುರು ನೀರಿಗಿಕ್ಕದ ಬಾಲೆಯರು.

**III. ಮೂರಕ್ಕೆ ಟಿಪ್ಪಣಿ ಬರೆಯಿರಿ. ೩x೨=೬**

೧. ಅಂಬಿಕಾತನಯ ದತ್ತ   ೨. ಚೆನ್ನವೀರ ಕಣವಿ
೩. ಬಾನು ಮುಷ್ತಾಕ್   ೪. ಕೌದಿ   ೫. ಅವ್ವ

**IV. ಕೆಳಗಿನ ಎರಡು ಪ್ರಶ್ನೆಗಳಿಗೆ ಉತ್ತರಿಸಿ. ೨x೫=೧೦**

೧) ಪ್ರೀತಿಯಲ್ಲಿ ಬಡವರಾಗಿದ್ದರೆ ಬದುಕಲು ಸಾಧ್ಯವಿಲ್ಲ ಎಂಬುದು 'ನಾನು ಬಡವಿ' ಕವಿತೆಯಲ್ಲಿ ಹೇಗೆ ಧ್ವನಿಸುತ್ತದೆ.
೨) ಅನಿಕೇತನವಾಗುವುದು ಇಂದು ಏಕೆ ಮುಖ್ಯ ಎಂಬುದನ್ನು ವಿವೇಚಿಸಿ.

(ಪು.ತಿ.ನೋ.)



೩) ಮನುಷ್ಯನಾಗುವುದಕ್ಕಿಂತ ಮರವಾಗಿ ಹುಟ್ಟಿದರೆ ಚೆನ್ನಾಗಿತ್ತು ಎಂಬುದನ್ನು 'ನಾನೊಂದು ಮರವಾಗಿದ್ದರೆ' ಕವಿತೆಯ ಹಿನ್ನೆಲೆಯಲ್ಲಿ ಬರೆಯಿರಿ.

**V. ಒಂದು ಪ್ರಶ್ನೆಗೆ ಉತ್ತರಿಸಿ. ೧x೧೦=೧೦**

೧. ಒಲೆ ಕವಿತೆಯು ಅನಾವರಣಗೊಳಿಸುವ ಹೆಣ್ಣಿನ ಬದುಕಿನ ಸ್ಥಿತ್ಯಂತರಗಳನ್ನು ವಿವರಿಸಿ.
೨. ಬೆಳಕಿನ ಪ್ರತಿಮೆಯ ಮೂಲಕ ಹೊಸ ಚೈತನ್ಯ ನಮ್ಮ ಬದುಕು ಬದಲಿಸುತ್ತದೆ ಎಂಬುದನ್ನು ಪ್ರಾರ್ಥನೆ ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿ.

### ಗದ್ಯ ಭಾಗ

**I. ಕೆಳಗಿನ ಐದು ಪದಗಳಿಗೆ ಸ್ವಂತವಾಕ್ಯ ರಚಿಸಿ. ೧x೫=೫**

೧. ವಿಜ್ಞಾಪನೆ   ೨. ಕಾನೂನು   ೩. ಪ್ರಯೋಗಶಾಲೆ   ೪. ಯಶಸ್ಸು
೫. ಹಕ್ಕು   ೬. ಭೂಮಿ   ೭. ಸಮಾನತೆ

**II. ಚೆಲ್ಲಾಪಿಲ್ಲಿಯಾಗಿರುವ ಪದಗಳನ್ನು ಅರ್ಥಪೂರ್ಣವಾಗಿ ರೂಪಿಸಿ. ೧x೫=೫**

೧. ವೈಶಿಷ್ಟ್ಯವಿದೆ ಎನ್ನಲಾರೆ ಅಂತ ಹೇಳಿಕೊಳ್ಳುವ
೨. ನಿಧಾನವಾಗಿ ಡಾಕ್ಟರ್ ಹೇಳಿದರು ಎಳೆದು ದೀರ್ಘ ಉಸಿರು
೩. ದಿನ ರಾಶಿಗೆ ಕಣದ ಕೊನೆಯ ಹಿರಿಯ ಪೂಜೆ
೪. ಮೂಲಭೂತವಾಗಿ ಜೀವಿ ಮನುಷ್ಯ ಒಳ್ಳೆಯ
೫. ತಿನ್ನುವ ಕಿತ್ತು ಬಡತನ ಮನೆಯಲ್ಲಿ

**III. ಎರಡಕ್ಕೆ ಟಿಪ್ಪಣಿ ಬರೆಯಿರಿ. ೨x೫=೧೦**

೧. ನಿರಂಕುಶಮತಿ   ೨. ಹುಲ್ಲುಕಡ್ಡಿ
೩. ಮೀಸಲಾತಿ   ೪. ವರ್ಣವ್ಯವಸ್ಥೆ

**IV. ಎರಡು ಪ್ರಶ್ನೆಗಳಿಗೆ ಉತ್ತರಿಸಿ. ೨x೫=೧೦**

೧. ಯಶಸ್ಸು, ಶ್ರೀಮಂತಿಕೆಯ ಸರಳ ಸೂತ್ರ ಎಂಬುದನ್ನು 'ಆಣಿಮುತ್ತು' ಲೇಖನದ ಹಿನ್ನೆಲೆಯಲ್ಲಿ ಬರೆಯಿರಿ.
೨. ಖಾಸಗೀಕರಣ ಅಸಮಾನತೆಯನ್ನು ಪೋಷಿಸುತ್ತದೆ. ಚರ್ಚಿಸಿ
೩. ಆಧುನಿಕ ಯುಗದಲ್ಲಿ ಮರೆಯಾಗುತ್ತಿರುವ ಗ್ರಾಮೀಣ ಸಂಸ್ಕೃತಿಯ ವಿವರಗಳನ್ನು 'ಕಣ ಕಾಣೆಯಾಗಿದೆ' ಲೇಖನದ ಹಿನ್ನೆಲೆಯಲ್ಲಿ ವಿವರಿಸಿ.

**V. ಎರಡು ಪ್ರಶ್ನೆಗಳಿಗೆ ಉತ್ತರಿಸಿ. ೨x೧೦=೨೦**

೧. 'ಮೌಲ್ಯಗಳು ಸೋಲುತ್ತಿವೆಯೊ, ಗೆಲ್ಲುತ್ತಿವೆಯೊ?' ಎಂಬ ಎ.ಎನ್. ಮೂರ್ತಿರಾವ್ ಅವರ ಪ್ರಬಂಧದ ಆಶಯ ಬರೆಯಿರಿ.
೨. ಡಾ. ಬಿ.ಆರ್. ಅಂಬೇಡ್ಕರ್‌ರವರು ಸಂವಿಧಾನ ರಚನಾ ಸಭೆಯಲ್ಲಿ ಹೇಳಿದ ಮಾತುಗಳನ್ನು ವಿಶ್ಲೇಷಿಸಿ.
೩. ಮಾಸ್ತಿ ಮತ್ತು ಬೈರನ ಗುಣ, ನಡವಳಿಕೆಗಳನ್ನು ತೇಜಸ್ವಿ ತಮ್ಮ ಲೇಖನದಲ್ಲಿ ಹೇಗೆ ಬಣ್ಣಿಸಿದ್ದಾರೆ.

***

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ಕಾವ ಪರೀಕ್ಷೆ – ೨೦೨೨

ಪ್ರಶ್ನೆಪತ್ರಿಕೆ – ೨

## ವ್ಯಾವಹಾರಿಕ ಕನ್ನಡ ಮತ್ತು ಸಂವಹನ ಕನ್ನಡ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೯೦**

### ಭಾಗ – ೧ – ವ್ಯಾವಹಾರಿಕ ಕನ್ನಡ

**ಅ. ಮೂರು ಪ್ರಶ್ನೆಗಳಿಗೆ ಉತ್ತರಿಸಿ.** **೩x೧೦=೩೦**

೧. ವ್ಯಾವಹಾರಿಕ ಪತ್ರದ ವಿವಿಧ ಅಂಗಗಳ ಪರಿಚಯ ಮಾಡಿಕೊಡಿ.

೨. ವರದಿ ಎಂದರೇನು? ವರದಿಯಲ್ಲಿ ಎಷ್ಟುವಿಧ? ಏಕವ್ಯಕ್ತಿ ವರದಿಯ ಮಾದರಿಯನ್ನು ಸಿದ್ಧಪಡಿಸಿ.

೩. ಅಭ್ಯರ್ಥನ ಪತ್ರ ಎಂದರೇನು? ಅಭ್ಯರ್ಥನ ಪತ್ರದ ಮಾದರಿಯನ್ನು ನೀಡಿ.

೪. ಸರ್ಕಾರಿ ಪತ್ರಗಳು ಎಂದರೇನು? ಎಷ್ಟು ವಿಧಗಳಿವೆ?

೫. ಕಚೇರಿ ವ್ಯವಹಾರಕ್ಕೆ ಕಂಪ್ಯೂಟರ್ ಬಳಕೆಯ ಅಗತ್ಯಗಳನ್ನು ವಿವರಿಸಿ. ಇ–ಮೇಲ್, ವೆಬ್‌ಸೈಟ್ ಬಳಕೆಯ ಪ್ರಾಮುಖ್ಯತೆಯನ್ನು ವಿವರಿಸಿ.

**ಆ. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ:** **೪x೫=೨೦**

೧. ವಿಚಾರಣಾ ಪತ್ರ
೨. ಮೂಗರ್ಜಿ
೩. ಆದೇಶ ಪತ್ರ
೪. ಸರ್ಕಾರಿ ಸುತ್ತೋಲೆ
೫. ಸಂದರ್ಶನ ಪತ್ರ
೬. ಆಹ್ವಾನ ಪತ್ರಿಕೆ

### ಭಾಗ – ೨ – ಸಂವಹನ ಕನ್ನಡ

**ಅ. ಎರಡು ಪ್ರಶ್ನೆಗಳಿಗೆ ಉತ್ತರಿಸಿ.** **೨x೧೦=೨೦**

೧. ಭಾಷಾ ಸಂವಹನ ಎಂದರೇನು? ಭಾಷೆಯಲ್ಲಿಯ ರೂಪಗಳು ಯಾವುವು ವಿವರಿಸಿ.

೨. ಸಾರ್ವಜನಿಕ ಸಂವಹನ ಎಂದರೇನು? ಭಿತ್ತಿಪತ್ರ ಮತ್ತು ಗೋಡೆ ಬರೆಹಗಳನ್ನು ಉದಾಹರಣೆ ಸಹಿತ ವಿವರಿಸಿ.

(ಪು.ತಿ.ನೋ.)

ಕಾ / ೨

೩. ‘ಹೊಗಳಿಕೆ’ – ಕುರಿತು ಪ್ರಬಂಧವನ್ನು ಬರೆಯಿರಿ.

೪. ಕೋಪದಲ್ಲಿ ಕೊಯ್ದ ಮೂಗು ಶಾಂತಿಯಲ್ಲಿ ಬಂದೀತೆ? ಗಾದೆ ಮಾತನ್ನು ವಿವರಿಸಿ.

**ಆ. ಎರಡಕ್ಕೆ ಟಿಪ್ಪಣಿ ಬರೆಯಿರಿ** **೨x೬=೧೨**

೧. ಘಟನಾ ನಿರೂಪಣೆ

೨. ಕರಪತ್ರ

೩. ಜಾಹೀರಾತು

**ಇ. ಎರಡು ವಾಕ್ಯಗಳನ್ನು ಕನ್ನಡಕ್ಕೆ ಅನುವಾದಿಸಿ.** **೨x೨=೪**

೧. God is great

೨. I read this book

೩. He may come from Mumbai

೪. Thank you very much.

**ಈ. ಎರಡು ವಾಕ್ಯಗಳನ್ನು ಇಂಗ್ಲಿಷ್‌ಗೆ ಅನುವಾದಿಸಿ.** **೨x೨=೪**

೧. ಕಡಿಮೆ ಮಾತಾಡಿ, ಹೆಚ್ಚು ಕೆಲಸ ಮಾಡಿ.

೨. ಶಬ್ದವನ್ನು ಕೇಳಿ ನಾನು ಎದ್ದೆನು.

೩. ನಿಶ್ಯಕ್ತರನ್ನು ಅವಮಾನಿಸಬೇಡ

೪. ನವೆಂಬರ್ ಒಂದು ತುಂಬ ತಂಪಾದ ತಿಂಗಳು

***